PW-01/CW-01
Date: 06.09.2022.

**ದಿನಾಂಕ 06.09.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಮಧ್ಯಂತರ ಅರ್ಜಿ ಆದೇಶದ ಮೇರೆಗೆ ನನ್ನ ಕಳುವಾದ ಒಡವೆಗಳನ್ನು ಬಿಡಿಸಿಕೊಂಡಿದ್ದು ಅವುಗಳನ್ನು ಈ ದಿನ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ . ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಒಂದು ನೆಕ್ಲೇಸ್, ಒಂದು ಜೊತೆ ಹ್ಯಾಂಗಿಂಗ್ಸ್, ಒಂದು ಜೊತೆ ಬಂಗಾರದ ಕಿವಿ ಗುಂಡು, ಒಂದು ಜೊತೆ ಜುಕ್ಕಿ ಸೆಟ್, ಒಂದು ಜೊತೆ ಹ್ಯಾಂಗಿಂಗ್ಸ್, 4 ಬಂಗಾರದ ಉಂಗುರಗಳು, ಒಂದು ಬೆಳ್ಳಿ ಲೋಟ, ಒಂದು ಬೆಳ್ಳಿ ಕಡ್ಡಿ, ಒಂದು ಬೆಳ್ಳಿ ಉಂಗುರ, 2 ಎಳೆ ಬಂಗಾರದ ಸರ ವನ್ನು ಪರಿಶೀಲಿಸಿ ಅದರ ಫೋಟೋವನ್ನು ಪಡೆದು ಬಂಗಾರ ಮತ್ತು ಬೆಳ್ಳಿಯ ಒಡವೆಗಳನ್ನು ಸಾಕ್ಷಿದಾರರಿಗೆ ಮರಳಿ ನೀಡಲಾಯಿತು. ಬೆಳ್ಳಿ ಮತ್ತು ಬಂಗಾರದ ಒಡವೆಗಳು ಇರುವ ಫೋಟೋವನ್ನು ನಿಪಿಃ 6 ಅಂತ ಗುರುತಿಸಲಾಯಿತು.

ನಮ್ಮ ಮನೆಯಲ್ಲಿ ಕಳ್ಳತನವಾದ ಬಗ್ಗೆ ಮತ್ತು ಒಡವೆಗಳನ್ನು ಬಿಡುಗಡೆ ಮಾಡಿಕೊಂಡ ಬಗ್ಗೆ 2 ಬಾರಿ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಒಡವೆಗಳನ್ನು ಚಿತ್ರದುರ್ಗ ಪೋಲೀಸ್ ಠಾಣೆಯಲ್ಲಿ ಮತ್ತು ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಒಡವೆಗಳನ್ನು ನೋಡಿ ಗುರುತಿಸಿದ್ದ ಬಗ್ಗೆ ಹಾಗೂ 1 ನೇ ಆರೋಪಿಯನ್ನು ನೋಡಿ ಗುರುತಿಸಿದ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸಲು ಆಗುವುದಿಲ್ಲ ಎಂದು ಹೇಳಿರುತ್ತಾರೆ.

**(ಈ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿಸಿದೆ)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 16.10.2017 ರಂದು ನನ್ನನ್ನು ಚಿತ್ರದುರ್ಗ ನಗರ ಪೊಲೀಸ್ ವೃತ್ತ ಕಚೇರಿಗೆ ಕರೆಸಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ತೋರಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಃ 1 ನೇ ಆರೋಪಿತನ ಪರ ಶ್ರೀ ಎನ್.ಟಿ.ಎಸ್., ವಕೀಲರಿಂದಃ**

ದೂರಿನಲ್ಲಿ ಏನು ಬರೆದಿದೆ ಅಂತ ಗೊತ್ತಿಲ್ಲ. ಪೊಲೀಸರು ಸಹಿ ಮಾಡು ಅಂತ ಹೇಳಿದ್ದಕ್ಕೆ ಮಾಡಿರುತ್ತೇನೆ. ಅದೇ ರೀತಿ ಚಿತ್ರದುರ್ಗದಲ್ಲಿ ಏನು ಹೇಳಿಕೆ ಪಡೆದಿರುತ್ತಾರೆ ಅಂತ ಗೊತ್ತಿಲ್ಲ. ಪೊಲೀಸರು ಸಹಿ ಮಾಡು ಅಂತ ಹೇಳಿದ್ದಕ್ಕೆ ಮಾಡಿರುತ್ತೇನೆ. ಆರೋಪಿತರನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ನಾನು ಆರೋಪಿತರನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ಅದೇ ರೀತಿ ಮಹಜರಿನಲ್ಲಿ ಏನು ಬರೆದಿದೆ ಅಂತ ಗೊತ್ತಿಲ್ಲ. ನಮ್ಮ ಮನೆಯಲ್ಲಿ ಯಾರು ಕಳ್ಳತನ ಮಾಡಿರುತ್ತಾರೆ ಅಂತ ಗೊತ್ತಿಲ್ಲ.

(3 ನೇ ಆರೋಪಿತರ ಪರ ವಕೀಲರನ್ನು ಕೂಗಿ ಕರೆಯಲಾಗಿ, ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು )

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.